ವಿಜಯ ಕರ್ನಾಟಕ

**Friday 08th October 2021, Page No.02**

## Video Conversation RVCE Principal and other colleges Principals: Entrepreneurship workshop

# ಉದ್ಯಮಿಯಾಗು ಉದ್ಯೋಗ ನೀಡು ಕಾರ್ಯಾಗಾರಕ್ಕೆ 3000 ನೋಂದಣಿ

**ವಿಕ ಸುದ್ದಿಲೋಕ** ಬೆಂಗಳೂರು

ಅ. 11 ಹಾಗೂ 12ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಾಗಾರಕ್ಕೆ ಈಗಾಗಲೇ ಸುಮಾರು 3000 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಕಾರ್ಯಾಗಾರದ ಪೂರ್ವ ಸಿದ್ಧತೆ ಭಾಗವಾಗಿ ಸಚಿವ ಮುರುಗೇಶ್ ನಿರಾಣಿ ಅವರು ಗುರುವಾರ ಆರ್.ವಿ. ಎಂಜಿನಿಯರಿಂಗ್ ಕಾಲೇಜು, ಎಪಿಎಸ್ ಪಾಲಿಟೆಕ್ನಿಕ್, ಆಕ್ಸ್‌ಫರ್ಡ್ ಕಾಲೇಜು, ಸ್ವಾಮಿ ವಿವೇಕಾನಂದ ಕಾಲೇಜು ಸೇರಿದಂತೆ ನಾನಾ ಕಾಲೇಜುಗಳ ಮುಖ್ಯಸ್ಥರು, ಪ್ರಾಂಶುಪಾಲರೊಂದಿಗೆ ವಿಡಿಯೊ ಸಂವಾದ ನಡೆಸಿ ಚರ್ಚಿಸಿದರು.

ವಿಶಿಷ್ಟ ಮತ್ತು ವಿನೂತನ ಕಾರ್ಯಾಗಾರದ ಮೂಲ ಉದ್ದೇಶ ಯುವ ಜನತೆಯ ಆರ್ಥಿಕ ಸ್ವಾವಲಂಬನೆ. ಅವರೇ ಉದ್ಯಮ ಸ್ಥಾಪಿಸಿ ಹಲವರಿಗೆ ಉದ್ಯೋಗ ನೀಡುವಂತಾಗಬೇಕು. ಉದ್ಯಮ ಸ್ಥಾಪನೆಗೆ ಅಗತ್ಯ ಸಿದ್ದತೆ, ಉದ್ಯಮ ಆರಂಭಿಸಿದ ಬಳಿಕ ಭದ್ರತೆ, ಹಣಕಾಸಿನ ನೆರವಿನ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಮುರುಗೇಶ್ ನಿರಾಣಿ ತಿಳಿಸಿದರು.

ಪ್ರತಿಯೊಬ್ಬ ಪ್ರಜೆಯು ಸ್ವಾವಲಂಬಿಯಾಗಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಆಕಾಂಕ್ಷೆ. ಈ ಕಾರ್ಯಕ್ರಮದ ಮೂಲಕ 'ಕರ್ನಾಟಕದಿಂದಲೇ ದೇಶಕ್ಕೆ ಹೊಸ ಸಂದೇಶ' ರವಾನೆಯಾಗಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು. ಕಾಲೇಜಿನ ಎಲ್ಲ ವಿಭಾಗದ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದು, ಜತೆಗೆ ಇತ್ತೀಚೆಗೆ ಪಾಸಾದವರು, ಓದನ್ನು ಅರ್ಧಕ್ಕೆ ನಿಲ್ಲಿಸಿದವರೂ ಭಾಗಿಯಾಗಬಹುದು.